# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 244 | Pages. 2 | Date: 09-09-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 244 - ಪುಟಗಳು : 2 | 09-09-2026 ಬುಧವಾರ | Ph: 8762954248 | ದರ : ₹1


# ಎನ್‌ಹೆಚ್-373 ಕಾಮಗಾರಿಗೆ 470 ಕೋ.ರೂ.: ಅನುಮೋದನೆ

## ಸಂಸದ ಶ್ರೇಯಸ್ ಪಟೇಲ್ ಶ್ರಮದ ಫಲ | 2030ಕ್ಕೆ ಕೆಲಸ ಪೂರ್ಣ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಜನರ ಬಹುದಿನಗಳ ಬೇಡಿಕೆಯಾಗಿದ್ದ ರಾಷ್ಟ್ರೀಯ ಹೆದ್ದಾರಿ-373ರ ಹಾಸನ-ಬೇಲೂರು ಮಾರ್ಗವನ್ನು ಚತುಷ್ಪಥ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಪರಿಷ್ಕೃತ 470.85 ಕೋ.ರೂ. ಅನುದಾನ ನೀಡಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಪರಿಷ್ಕೃತ ಮೊತ್ತ ಬಿಡುಗಡೆಗೆ ಆಗ್ರಹಿಸಿ ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಕೆ.ಸುರೇಶ್ ಅವರು ಅನೇಕ ಬಾರಿ ಕೇಂದ್ರ ಸಚಿವರಿಗೆ ಪತ್ರ ಬರೆದಿದ್ದರು. ಸಂಸತ್ ಅಧಿವೇಶನದಲ್ಲೂ ಶ್ರೇಯಸ್ ಪಟೇಲ್ ಅವರು ಹಲವು ಬಾರಿ ವಿಷಯ ಪ್ರಸ್ತಾಪಿಸಿದ್ದರು. ಸಂಬಂಧಪಟ್ಟ ಸಚಿವಾಲಯ ಮತ್ತು ಅಧಿಕಾರಿಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು ಯೋಜನೆಯ ತ್ವರಿತ ಅನುಮೋದನೆಗೆ ಒತ್ತಾಯಿಸಿದ್ದರು.

ಇದೀಗ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ರಾಷ್ಟ್ರೀಯ ಹೆದ್ದಾರಿ-373ರ ವಿನ್ಯಾಸ ಸರಪಳಿ ಕಿ.ಮೀ. 27.780 ರಿಂದ ಕಿ.ಮೀ. 57.320ರ ವರೆಗಿನ ಒಟ್ಟು 29.54 ಕಿ.ಮೀ. ಹಾಸನ-ಬೇಲೂರು ರಸ್ತೆ ಭಾಗವನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು 470.85 ಕೋ.ರೂ. ಮಂಜೂರು ಮಾಡಿದೆ. ಈ ಯೋಜನೆಯನ್ನು ಇಪಿಸಿ ಮಾದರಿಯಲ್ಲಿ ಎನ್‌ಹೆಚ್(ಒ)



ವಾರ್ಷಿಕ ಯೋಜನೆ 2022-23ರ ಪ್ಯಾಕೇಜ್-11ರ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ ಎಂದು ಸಂಸದರು ತಿಳಿಸಿದ್ದಾರೆ.

ಪರಿಷ್ಕೃತ ಯೋಜನೆಯಡಿ ಭೂಸ್ವಾಧೀನಕ್ಕಾಗಿ 115.30 ಕೋ.ರೂ. ಹಾಗೂ ಭೂಸ್ವಾಧೀನ ಸೇರಿ ಪೂರ್ವ ನಿರ್ಮಾಣ ಚಟುವಟಿಕೆಗಳಿಗೆ ಒಟ್ಟು 128.90 ಕೋ.ರೂ. ಮೀಸಲಿಡಲಾಗಿದೆ.

ರಾಜ್ಯ ಲೋಕೋಪಯೋಗಿ ಇಲಾಖೆ ಭೂ ಸ್ವಾಧೀನ ಪರಿಹಾರ ವಿತರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ, 2026ರ ಅಕ್ಟೋಬರ್ 31ರ ಒಳಗೆ ಕಾಮಗಾರಿಯ ನಿಗದಿತ ಪ್ರಾರಂಭ ದಿನಾಂಕವನ್ನು ಅಂತಿಮಗೊಳಿಸಬೇಕೆಂದು ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ. 2029-30ನೇ ಆರ್ಥಿಕ ವರ್ಷದೊಳಗೆ ಕಾಮಗಾರಿ ಪೂರ್ಣಗೊಳಿಸುವ ಗುರಿ ನಿಗದಿಪಡಿಸಲಾಗಿದೆ ಎಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದ್ದಾರೆ.

ಕೇಂದ್ರಕ್ಕೆ ಸರ್ಕಾರಕ್ಕೆ ಧನ್ಯವಾದ: ಜಿಲ್ಲೆಯ ಜನರ ಬಹುದಿನಗಳ ಬೇಡಿಕೆಗೆ ಸ್ಪಂದಿಸಿ 470.85 ಕೋ.ರೂ. ಅನುದಾನಕ್ಕೆ ಅನುಮೋದನೆ ನೀಡಿರುವ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಜಿಲ್ಲೆಯ ಜನರ ಪರವಾಗಿ ಸಂಸದ ಶ್ರೇಯಸ್ ಪಟೇಲ್ ಧನ್ಯವಾದ ಸಲ್ಲಿಸಿದ್ದಾರೆ.

ಹಾಸನ-ಬೇಲೂರು ಮಾರ್ಗವು ಜಿಲ್ಲೆಯ ಜನರು, ರೈತರು, ವ್ಯಾಪಾರಿಗಳು, ವಿದ್ಯಾರ್ಥಿಗಳು ಮತ್ತು ಪ್ರವಾಸಿಗರಿಗೆ ಪ್ರಮುಖ ಸಂಪರ್ಕ ರಸ್ತೆಯಾಗಿದೆ. ಈ ರಸ್ತೆಯನ್ನು ನಾಲ್ಕು ಪಥವಾಗಿ ಅಗಲೀಕರಣ ಮಾಡುವುದರಿಂದ ಸಂಚಾರ ದಟ್ಟಣೆ ಮತ್ತು ಪ್ರಯಾಣದ ಸಮಯ ಕಡಿಮೆಯಾಗುವುದರ ಜೊತೆಗೆ ರಸ್ತೆ ಸುರಕ್ಷತೆ, ವ್ಯಾಪಾರ, ಪ್ರವಾಸೋದ್ಯಮ ಹಾಗು ಜಿಲ್ಲೆಯ ಸಮಗ್ರ ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಉತ್ತೇಜನ ದೊರೆಯಲಿದೆ ಎಂದು ಹೇಳಿದ್ದಾರೆ.

# ದ ಸ್ಕಾಲರ್ಸ್ ವರ್ಲ್ಡ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದ ಸ್ಕಾಲರ್ಸ್ ವರ್ಲ್ಡ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಸಂಭ್ರಮ, ಸಡಗರ ಹಾಗೂ ಭಕ್ತಿ-ಗೌರವಗಳೊಂದಿಗೆ ಆಚರಿಸಲಾಯಿತು.

ಮಾಜಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ನಡೆದ ಈ ವಿಶೇಷ ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಗುರುವೃಂದಕ್ಕೆ ಪ್ರೀತಿ ಹಾಗೂ ಕೃತಜ್ಞತೆಯನ್ನು ಸಮರ್ಪಿಸಿದರು.

ವಿದ್ಯಾರ್ಥಿಗಳು ಶಿಕ್ಷಕರಿಗಾಗಿ ವಿಶೇಷವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಆಕರ್ಷಕ ನೃತ್ಯ, ಇಂಪಾದ ಹಾಡು, ಅರ್ಥಪೂರ್ಣ ಭಾಷಣ ಹಾಗೂ ಮನರಂಜನಾ ಆಟಗಳ ಮೂಲಕ ಶಿಕ್ಷಕರನ್ನು ಸಂತೋಷಪಡಿಸಿದರು. ವಿದ್ಯಾರ್ಥಿಗಳ ಈ ಅತ್ಯುತ್ತಮ ಪ್ರತಿಭಾ ಪ್ರದರ್ಶನವು ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ತಂದುಕೊಟ್ಟಿತು.

ಕಾರ್ಯಕ್ರಮದಲ್ಲಿ ಶಿಕ್ಷಕರ ಪರಿಶ್ರಮ, ಸಮರ್ಪಣಾ ಭಾವ ಮತ್ತು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಅವರ ಮಹತ್ವದ ಪಾತ್ರವನ್ನು ಶ್ಲಾಘಿಸಲಾಯಿತು. ಶಿಕ್ಷಕರು ವಿದ್ಯಾರ್ಥಿಗಳ ಕೇವಲ ಶೈಕ್ಷಣಿಕ ಪ್ರಗತಿಗೆ ಮಾತ್ರ ಸೀಮಿತವಾಗದೆ, ಅವರಲ್ಲಿ ಉತ್ತಮ ಮೌಲ್ಯಗಳು, ಶಿಸ್ತು, ಆತ್ಮವಿಶ್ವಾಸವನ್ನು ತುಂಬಿ ಜವಾಬ್ದಾರಿಯುತ ನಾಗರಿಕರನ್ನಾಗಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂಬ ಆಶಯ ವ್ಯಕ್ತವಾಯಿತು.

ಶಾಲೆಯ ಆಡಳಿತಾಧಿಕಾರಿ ಡಾ. ಎಚ್.ಎನ್. ಚಂದ್ರಶೇಖರ್ ಮಾತನಾಡಿ, ಉತ್ತಮ ಶಿಕ್ಷಕ ಕೇವಲ ಪಠ್ಯದ ಪಾಠವನ್ನು ಮಾತ್ರ ಕಲಿಸುವುದಿಲ್ಲ. ಬದಲಿಗೆ ಬದುಕಿನ ದಾರಿಯನ್ನು ಸಹ ತೋರಿಸುತ್ತಾನೆ. ನೀವೆಲ್ಲರೂ ಅಂತಹ ಆದರ್ಶ ಹಾಗೂ ಉತ್ತಮ ಶಿಕ್ಷಕರಾಗಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯದರ್ಶಿ ಮಮತಾ ಚಂದ್ರಶೇಖರ್, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದ ಉಪಸ್ಥಿತರಿದ್ದರು.

# ವಿರೂಪಪುರ ರಸ್ತೆ ಕಾಮಗಾರಿಗೆ ಶಾಸಕರಿಂದ ಭೂಮಿಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ವಿರೂಪಪುರ ಗ್ರಾಮದ ರಸ್ತೆ ಅಭಿವೃದ್ಧಿಗೆ ಕೊನೆಗೂ ಕಾಲ ಕೂಡಿ ಬಂದಿದ್ದು, 40 ಲಕ್ಷ ರೂ. ವೆಚ್ಚದಲ್ಲಿ 590 ಮೀಟರ್ ರಸ್ತೆ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಮಂಗಳವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ರಸ್ತೆ ನಿರ್ಮಾಣವಾಗಬೇಕು ಎಂಬುದು ಗ್ರಾಮಸ್ಥರ ಹಲವು ವರ್ಷಗಳ ಕನಸಾಗಿತ್ತು. ವಿವಿಧ ಕಾರಣಗಳಿಂದ ಈವರೆಗೆ ಕಾಮಗಾರಿ ಕೈಗೆತ್ತಿಕೊಳ್ಳಲು ಸಾಧ್ಯವಾಗಿರಲಿಲ್ಲ. ವಾಸ್ತವವಾಗಿ ಬಹಳ ಹಿಂದೆಯೇ ಈ ರಸ್ತೆ ಅಭಿವೃದ್ಧಿಯಾಗಬೇಕಿತ್ತು ಎಂದರು.

ಅಭಿವೃದ್ಧಿ ಕಾಮಗಾರಿಗಳಲ್ಲಿ ರಾಜಕೀಯ ಮಾಡದೆ, ನಿಜವಾಗಿಯೂ ಎಲ್ಲಿ ಅಗತ್ಯವಿದೆಯೋ ಅಲ್ಲಿಗೆ ಆದ್ಯತೆ ನೀಡಬೇಕು. ಅನುದಾನ ಸೀಮಿತವಾಗಿರುವುದರಿಂದ ಲಭ್ಯ ಅನುದಾನವನ್ನು ಅತ್ಯಂತ ಅಗತ್ಯವಿರುವ ಗ್ರಾಮಗಳ ರಸ್ತೆ, ಕುಡಿಯುವ ನೀರು ಹಾಗೂ ಮೂಲಸೌಕರ್ಯಗಳಿಗೆ ಬಳಸಲಾಗುತ್ತಿದೆ. ಪಕ್ಷಾತೀತವಾಗಿ ಮತ್ತು ಪ್ರಾಮಾಣಿಕವಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡುವುದು ನಮ್ಮ ಆದ್ಯತೆ ಎಂದು ಹೇಳಿದರು.



### ಜೆಜೆಎಂ ನೀರು ಬಿಡಲು ಗಡುವು

ಗ್ರಾಮದಲ್ಲಿನ ಜಲಜೀವನ್ ಮಿಷನ್ (ಜೆಜೆಎಂ) ಕಾಮಗಾರಿಯ ಪ್ರಗತಿಯನ್ನೂ ಇದೇ ವೇಳೆ ಶಾಸಕರು ಅಧಿಕಾರಿಗಳಿಂದ ವಿಚಾರಿಸಿದರು. ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದ್ದರೂ ಕೆಲವೆಡೆ ಸೋರಿಕೆ ಸಮಸ್ಯೆ ಇರುವುದನ್ನು ಅಧಿಕಾರಿಗಳು ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಬಾಕಿ ಸಮಸ್ಯೆಗಳನ್ನು ಒಂದು ವಾರದೊಳಗೆ ಸರಿಪಡಿಸಿ ಮನೆಗಳಿಗೆ ನಲ್ಲಿ ನೀರು ಪೂರೈಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ರಸ್ತೆ ಕಾಮಗಾರಿ ಉದ್ಘಾಟನೆಗೆ ಬರುವ ವೇಳೆಗೆ ಜೆಜೆಎಂ ಕಾಮಗಾರಿಯ ಎಲ್ಲ ಸಮಸ್ಯೆಗಳನ್ನೂ ಪರಿಹರಿಸಿ ಮನೆಗಳಿಗೆ ನೀರು ಹರಿಯಬೇಕು. ರಸ್ತೆ ಹಾಗೂ ಕುಡಿಯುವ ನೀರಿನ ಯೋಜನೆ ಎರಡನ್ನೂ ಜನರ ಬಳಕೆಗೆ ಸಮರ್ಪಿಸೋಣ. ಅಧಿಕಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು.

ಆಲೂರು ತಾಲೂಕಿನಲ್ಲಿ ಇನ್ನೂ ಹಲವು ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕಿದೆ. ಕಟ್ಟಕಡೆಯ ಗ್ರಾಮಕ್ಕೂ ಉತ್ತಮ ರಸ್ತೆ, ಕುಡಿಯುವ ನೀರು ಹಾಗೂ ವಿದ್ಯುತ್ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಜವಾಬ್ದಾರಿ ಜನಪ್ರತಿನಿಧಿಗಳು ಮತ್ತು ಸರ್ಕಾರದ ಮೇಲಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ರಸ್ತೆ ಕಾಮಗಾರಿಗೆ ಅಗತ್ಯ ಜಲ್ಲಿ ಸೇರಿದಂತೆ ಪೂರ್ವಸಿದ್ಧತೆ ಮಾಡಿಕೊಳ್ಳಲಾಗಿದ್ದು, ಕಾಮಗಾರಿಯನ್ನು ತಕ್ಷಣ ಆರಂಭಿಸಿ ಆದಷ್ಟು ಬೇಗ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಶಾಸಕ ಸಿಮೆಂಟ್ ಮಂಜು ಸೂಚಿಸಿದರು. ಕಾಮಗಾರಿ ಆರಂಭವಾದ ಬಳಿಕ ಒಂದು ವಾರದೊಳಗೆ ಪೂರ್ಣಗೊಳಿಸಲು ಕ್ರಮ ವಹಿಸುವಂತೆ ತಿಳಿಸಿದರು.

# ಕೆರೆ ಕಟ್ಟೆಗಳಿಗೆ ನೀರು ಹರಿಸಲು ವಿಳಂಬ: ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಿರೀಸಾವೆ-ಜುಟ್ಟನಹಳ್ಳಿ ಏತ ನೀರಾವರಿ ಯೋಜನೆಯಡಿ ಡಿಪಿಆರ್‌ಗೆ ಒಳಪಟ್ಟಿರುವ ಕೆರೆಗಳಿಗೆ ನೀರು ಹರಿಸದೆ ಸಣ್ಣಪುಟ್ಟ ಕೆರೆ-ಕಟ್ಟೆಗಳಿಗೆ ಹರಿಸುತ್ತಿರುವುದನ್ನು ವಿರೋಧಿಸಿ ತಾಲ್ಲೂಕಿನ ಮತಿಘಟ್ಟ ಗ್ರಾಮ ಪಂಚಾಯಿತಿ ಆವರಣದಲ್ಲಿ ರೈತರು ಮಂಗಳವಾರ ಪ್ರತಿಭಟನೆ ನಡೆಸಿದರು.

ರೈತ ಮುಖಂಡ ನಾಗರಾಜು ಮಾತನಾಡಿ, ಡಿಪಿಆರ್ ಮೂಲಕ ಯೋಜನೆ ರೂಪಿಸಿದ ಕೆರೆಗಳಿಗೆ ಪ್ರಥಮವಾಗಿ ಆದ್ಯತೆ ನೀಡದೆ ರಾಜಕೀಯ ಪ್ರೇರಿತರಾಗಿರುವ ಅಧಿಕಾರಿಗಳು, ಡಿಪಿಆರ್ ನಂತರದಲ್ಲಿ ಪಟ್ಟಿಗೆ ಸೇರಿದ ಸಣ್ಣಪುಟ್ಟ ಕೆರೆಕಟ್ಟೆಗಳಿಗೆ ನೀರು ತುಂಬಿಸಲು ಮುಂದಾಗಿರುವುದು ಸರಿಯಲ್ಲ ಎಂದು ಆರೋಪಿಸಿದರು.

ಹಿರೀಸಾವೆ ಭಾಗದ ರೈತ ಮುಖಂಡರ 42 ವರ್ಷಗಳ ಹೋರಾಟದ ಫಲವಾಗಿ ಯೋಜನೆ ರೂಪುಗೊಂಡು ಕಳೆದ ಎರಡು ವರ್ಷಗಳಿಂದ ಹಿರೀಸಾವೆ ಹಾಗೂ ಜುಟ್ಟನಹಳ್ಳಿ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಹಿಂದಿನ ವರ್ಷ ಮಳೆ ಆಶ್ರಯದಲ್ಲಿ ಕೆರೆಗಳು ತುಂಬಿದ್ದವು. ಆದರೆ ಈ ಬಾರಿ ಪೂರ್ವ ಮುಂಗಾರಿನಿಂದಲೂ ಮಳೆ ಇಲ್ಲದೆ ಬರ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.



### ಹಿರೀಸಾವೆಯಲ್ಲಿ ಇಂದು ಪ್ರತಿಭಟನೆ

ಕೆರೆ ಕಟ್ಟೆಗಳಿಗೆ ನೀರು ತುಂಬಿಸುವಲ್ಲಿ ಆದ್ಯತೆ ನೀಡದೆ ಇರುವುದನ್ನು ಖಂಡಿಸಿ ಹಿರೀಸಾವೆ, ಮತಿಘಟ್ಟ ಹಾಗೂ ಜುಟ್ಟನಹಳ್ಳಿ ಸೇರಿ 3 ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರು ಸೇರಿ ಸೆ.9 ಬುಧವಾರ ಬೆಳಗ್ಗೆ 10.30 ಕ್ಕೆ ಹಿರೀಸಾವೆ ಗ್ರಾಮದ ಶ್ರೀಕಂಠಯ್ಯ ವೃತ್ತದಲ್ಲಿ ರಾಷ್ಟ್ರೀಯ ಹೆದ್ದಾರಿ 75 ತಡೆದು ಪ್ರತಿಭಟನೆಗೆ ನಿರ್ಧರಿಸಿದ್ದಾರೆ.

ಸರ್ಕಾರದ ಆದೇಶದಂತೆ ಕಳೆದ 15 ದಿನಗಳಿಂದ ಏತ ನೀರಾವರಿ ಮೂಲಕ ನೀರೆತ್ತಿ ಕೆರೆಗಳಿಗೆ ತುಂಬಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಆದರೆ ಯೋಜನೆಗೆ ಡಿಪಿಆರ್ ಮೂಲಕ ಸೇರ್ಪಡೆಗೊಂಡಿರುವ ಕೆರೆಗಳಿಗೆ ನೀರು ಹರಿಸದೆ ನಂತರದಲ್ಲಿ ಸೇರ್ಪಡೆಗೊಂಡ ಕೆರೆಗಳಿಗೆ ತುಂಬಿಸಲಾಗುತ್ತಿದೆ. ಇದರಲ್ಲಿ ಅಧಿಕಾರಿಗಳ ಲೋಪದೋಷ ಹಾಗೂ ರಾಜಕೀಯ ಪ್ರೇರಿತವು ಎದ್ದು ಕಾಣುತ್ತಿದೆ ಎಂದು ದೂರಿದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಿ.ಎನ್.ಮಂಜುನಾಥ್ ಮಾತನಾಡಿ, ಕೆರೆಗಳಿಗೆ ನೀರು ಹರಿಸುತ್ತಿರುವುದು ಒಳ್ಳೆಯ ವಿಚಾರ. ಆದರೆ ರೈತ ರೈತರ ನಡುವೆ ಒಡಕು ಮೂಡಿಸುವುದು ಸರಿಯಲ್ಲ. ಈ ಭಾಗದ ಎಲ್ಲಾ ರೈತರಿಗೂ ನೀರು ಅಗತ್ಯ. ಅದನ್ನು ನ್ಯಾಯ ಸಮ್ಮತವಾಗಿ ಹಂಚಿಕೆ ಮಾಡಿ ಕೆರೆಗಳಿಗೆ ನೀರು ತುಂಬಿಸುವ ಕೆಲಸವಾಗಬೇಕು. ಆದರೆ ಅಧಿಕಾರಿಗಳು ರಾಜಕೀಯ ಪ್ರೇರಿತರಾಗಿರುವಂತೆ ಕಂಡುಬರುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತ ಮುಖಂಡ ನಿಂಗೇಗೌಡ, ದಲಿತಪರ ಸಂಘಟನೆಗಳ ಮುಖಂಡ ಮತಿಘಟ್ಟ ರಂಗಸ್ವಾಮಿ, ರೈತ ಸಂಘದ ರಘು ಮಾತನಾಡಿದರು.

# ಸ್ಥಳೀಯ ಸಂಸ್ಥೆ ಚುನಾವಣೆ ನಡೆಸದೆ ಅನುದಾನ ವಾಪಸ್

## ಮಾಜಿ ಸಚಿವ ಎ.ಮಂಜು ಗಂಭೀರ ಆರೋಪ | ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ಗ್ರಾಪಂ, ತಾಪಂ ಹಾಗೂ ಜಿಪಂ ಚುನಾವಣೆ ನಡೆಸದ ಪರಿಣಾಂ 15ನೇ ಹಣಕಾಸು ಆಯೋಗದ 38 ಸಾವಿರ ಕೋಟಿ ರೂ. ವಾಪಸ್ ಹೋಗಿದ್ದು, ರಾಜ್ಯ ಸರ್ಕಾರ ಅಭಿವೃದ್ಧಿ ಕಡೆಗಣಿಸಿದೆ ಎಂದು ಶಾಸಕ ಎ. ಮಂಜು ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಸಕಾಲದಲ್ಲಿ ಲೋಕಲ್ ಬಾಡಿ ಚುನಾವಣೆ ನಡೆಸದ ಪರಿಣಾಮ ಕೇಂದ್ರದ ಸುಮಾರು 38 ಸಾವಿರ ಕೋಟಿ ಅನುದಾನ ಬಂದಿಲ್ಲ, ಬಂದ ಹಣವೂ ದುರ್ಬಳಕೆಯಾಗಿದೆ. ಚುನಾವಣೆ ನಡೆಸುವುದು ಸರ್ಕಾರದ ಕರ್ತವ್ಯ. ಚುನಾಯಿತ ಪ್ರತಿನಿಧಿಗಳಿಲ್ಲದೆ ಪಂಚಾಯತ್ ರಾಜ್ ವ್ಯವಸ್ಥೆ ಮೂಲ ಆಶಯವೇ ದುರ್ಬಲವಾಗುತ್ತದೆ. ಇದರಿಂದ ಜನರ ಹಣ, ಗ್ರಾಮೀಣ ಅಭಿವೃದ್ಧಿ ಹಾಗೂ ಪ್ರಜಾಪ್ರಭುತ್ವ ಮೂರಕ್ಕೂ ನಷ್ಟವಾಗಿದೆ. ಪಂಚಾಯಿತಿ ಚುನಾವಣೆ ಕೇವಲ ಎಲೆಕ್ಷನ್ ಅಲ್ಲ, ಮುಂದಿನ ಹಂತದ ನಾಯಕತ್ವಕ್ಕೆ ಬೆಳೆಯಲು ದೊರೆಯುವ ಪ್ರಮುಖ ವೇದಿಕೆ. ಹೀಗಾಗಿ ಕೂಡಲೇ ಚುನಾವಣೆ ನಡೆಸುವಂತೆ ಒತ್ತಾಯಿಸಿದರು.




ಚುನಾಯಿತ ಪ್ರತಿನಿಧಿಗಳಿಲ್ಲದೆ ಪಂಚಾಯಿತಿ ವ್ಯವಸ್ಥೆ ಮುಂದುವರಿದರೆ, ಜನರ ನೇರ ಪಾಲ್ಗೊಳ್ಳುವಿಕೆ ಕಡಿಮೆಯಾಗುತ್ತದೆ. ಅಧಿಕಾರಿಗಳು ತಮ್ಮ ಆಡಳಿತಾತ್ಮಕ ಜವಾಬ್ದಾರಿಯನ್ನು ನಿರ್ವಹಿಸಬಹುದಾದರೂ, ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ಮಾತ್ರ ಜನರ ಆಶಯವನ್ನು ನೇರವಾಗಿ ಪ್ರತಿಬಿಂಬಿಸಲು ಸಾಧ್ಯ ಎಂದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನವನ್ನು ಗ್ರಾಮಗಳ ಮೂಲಸೌಕರ್ಯ ಅಭಿವೃದ್ಧಿಗೆ ಬಳಸಬೇಕಾಗಿದೆ. ಆದರೆ ಚುನಾವಣೆ ನಡೆಯದೆ ಅನುದಾನದ ಬಳಕೆ ಹಾಗೂ ಆದ್ಯತೆ ನಿಗದಿಪಡಿಸುವ ಪ್ರಕ್ರಿಯೆಯಲ್ಲಿ ಜನಪ್ರತಿನಿಧಿಗಳ ಪಾತ್ರ ಇಲ್ಲದಂತಾಗಿದೆ ಎಂದರು.

ಈಗಾಗಲೇ ಬಿಡುಗಡೆಯಾಗಿರುವ ಅನುದಾನ, ಬಳಕೆಯಾದ ಮೊತ್ತ ಹಾಗೂ ಬಾಕಿ ಉಳಿದಿರುವ ಹಣದ ಕುರಿತು ಸಮಗ್ರ ಲೆಕ್ಕಪತ್ರ ಪರಿಶೀಲನೆ ನಡೆಸಬೇಕು. ಹೊಸ ನಾಯಕತ್ವ ಬೆಳೆಯಬೇಕಾದರೆ ಸ್ಥಳೀಯ ಸಂಸ್ಥೆಗಳಿಗೆ ಸಕಾಲದಲ್ಲಿ ಚುನಾವಣೆ ನಡೆಯಲೇಬೇಕು. ಇದರಿಂದಲೇ ಹಣಕಾಸು ಯೋಜನೆಯಡಿ ರಾಜ್ಯಕ್ಕೆ ಆಗಿರುವ ಅನ್ಯಾಯದ ಬಗ್ಗೆ ಶ್ವೇತ ಪತ್ರ ಹೊರಡಿಸಬೇಕು ಎಂದು ಮಂಜು ಆಗ್ರಹಿಸಿದರು.

ಚುನಾಯಿತ ಪ್ರತಿನಿಧಿಗಳ ಮೂಲಕ ಸ್ಥಳೀಯ ಆಡಳಿತವನ್ನು ಪುನಃ ಸ್ಥಾಪಿಸಬೇಕು. ಜತೆಗೆ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾಗಿರುವ ಹಣಕಾಸು ಆಯೋಗದ ಅನುದಾನಗಳ ಕುರಿತು ಸಂಪೂರ್ಣ ಲೆಕ್ಕಪತ್ರ ಪರಿಶೀಲನೆ ನಡೆಸಿ, ಹಣ ಯಾವ ಉದ್ದೇಶಕ್ಕೆ ಬಳಕೆಯಾಗಿದೆ ಎಂಬುದನ್ನು ಸಾರ್ವಜನಿಕರಿಗೆ ತಿಳಿಸಬೇಕು. ಅಭಿವೃದ್ಧಿ ಕಾಮಗಾರಿಗಳಲ್ಲಿ ಲೋಪ ಕಂಡುಬಂದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಎಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿದರಿಕೆರೆ ಜಯರಾಮ್, ನಗರಸಭೆ ಮಾಜಿ ಸದಸ್ಯರಾದ ಕಮಲ್ ಕುಮಾರ್, ಕ್ರಾಂತಿ ಪ್ರಸಾದ್ ತ್ಯಾಗಿ, ರವಿಶಂಕರ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸತೀಶ್, ಬಾಲಸುಬ್ರಹ್ಮಣ್ಯ ಮೊದಲಾದವರಿದ್ದರು.

# ಶ್ರವಣಬೆಳಗೊಳದಲ್ಲಿ ಬೆಣ್ಣೆ ಮಾರಾಟ ಪರಿಶೀಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಕಲಬೆರಕೆ ಹಾಗೂ ಕಳಪೆ ಗುಣಮಟ್ಟದ ಬೆಣ್ಣೆ ಮಾರಾಟ ಮಾಡಲಾಗುತ್ತಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಟಿ.ಎಚ್. ಹರೀಶ್ ನೇತೃತ್ವದ ಅಧಿಕಾರಿಗಳ ತಂಡ ಮಂಗಳವಾರ ತಾಲ್ಲೂಕಿನ ಶ್ರವಣಬೆಳಗೊಳದಲ್ಲಿ ತಪಾಸಣೆ ನಡೆಸಿತು.

ಮಾರುತಿ ವ್ಯಾನ್ ಹಾಗೂ ಆಪೆ ಆಟೋಗಳಲ್ಲಿ ಬೆಣ್ಣೆ ತಂದು ರೈತ ಮಹಿಳೆಯರ ಸೋಗಿನಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡಲಾಗುತ್ತಿದೆ ಎಂಬ ಸ್ಥಳೀಯರ ದೂರಿನ ಹಿನ್ನೆಲೆಯಲ್ಲಿ ಅಧಿಕಾರಿಗಳು ಪರಿಶೀಲನೆ ಕೈಗೊಂಡರು.

ಅಧಿಕಾರಿಗಳು ತಪಾಸಣೆಗೆ ಬರುತ್ತಿದ್ದಂತೆ ಮಾರಾಟಕ್ಕೆ ತಂದಿದ್ದ ಬೆಣ್ಣೆ ಹಾಗೂ ವಾಹನಗಳನ್ನು ಅಲ್ಲೇ ಬಿಟ್ಟು ನಕಲಿ ಬೆಣ್ಣೆ ಮಾರಾಟಗಾರರು ಸ್ಥಳದಿಂದ ಪರಾರಿಯಾಗಿದ್ದಾರೆ. ಈ ವೇಳೆ ಮಾರಾಟಕ್ಕೆ ಇಡಲಾಗಿದ್ದ ಬೆಣ್ಣೆಯ ಮಾದರಿ ಸಂಗ್ರಹಿಸಿ ಗುಣಮಟ್ಟ ಪರೀಕ್ಷೆಗಾಗಿ ಹಾಸನದ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಪಟ್ಟಣಕ್ಕೆ ಹೊರಗಿನಿಂದ ವಾಹನಗಳಲ್ಲಿ ಬೆಣ್ಣೆ ತಂದು ಮಾರಾಟ ಮಾಡಲಾಗುತ್ತಿದ್ದು, ಅದರ ಗುಣಮಟ್ಟದ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಆಹಾರ ಸುರಕ್ಷತೆ ಹಾಗೂ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಅಧಿಕಾರಿಗಳು ತಪಾಸಣೆ ನಡೆಸಿದ್ದಾರೆ.



ಬೆಣ್ಣೆಯ ಮಾದರಿಗಳ ಪರೀಕ್ಷಾ ವರದಿ ಬಂದ ಬಳಿಕ ಅದರ ಗುಣಮಟ್ಟದ ಕುರಿತು ಸ್ಪಷ್ಟತೆ ದೊರೆಯಲಿದೆ. ವರದಿಯಲ್ಲಿ ಕಳಪೆ ಗುಣಮಟ್ಟ ಅಥವಾ ಕಲಬೆರಕೆ ದೃಢಪಟ್ಟರೆ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿ ಶರತ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮೋಹನ್, ಅಚಲ್ ಹಾಗೂ ಸ್ಥಳೀಯ ರೈತರು ಇದ್ದರು.

# ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಭಾರೀ ಪೈಪೋಟಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗಣೇಶ ಚತುರ್ಥಿ ಸಂಭ್ರಮಕ್ಕೆ ದಿನಗಣನೆ ಆರಂಭವಾಗಿದ್ದು, ಜಿಲ್ಲಾದ್ಯಂತ ಹಬ್ಬದ ಸಿದ್ಧತೆ ಜೋರಾಗಿದೆ. ಸಾರ್ವಜನಿಕ ಗಣೇಶ ಮೂರ್ತಿಗಳು ಹೊರ ರಾಜ್ಯಗಳಿಂದ ಈಗಾಗಲೇ ಬರಲಾರಂಭಿಸಿದ್ದು ಸಂಭ್ರಮದ ವಾತಾವರಣ ಮನೆ ಮಾಡಿದೆ. ಬೃಹದಾಕಾರದ ಗಣೇಶ ಮೂರ್ತಿಗಳ ಸ್ವಾಗತಕ್ಕಾಗಿ ಅದ್ದೂರಿ ಮೆರವಣಿಗೆಗಳು ಜನಮನ ಸೆಳೆಯುತ್ತಿದೆ. ಗೌರಿ-ಗಣೇಶ ಹಬ್ಬದ ಸಂಭ್ರಮ ಈಗಾಗಲೇ ಮೇಳೈಸಿದೆ.

ಸೆ. 14ಕ್ಕೆ ಗೌರಿ-ಗಣೇಶ ಹಬ್ಬವಿದ್ದು, ಸಾರ್ವಜನಿಕ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಸಾಕಷ್ಟು ಹಣ ವ್ಯಯ ಮಾಡಲಾಗುತ್ತಿದೆ. ನಗರದ ಉದಯಗಿರಿ ಬಡಾವಣೆಯ ಸಾಮ್ರಾಟ್ ಗಣೇಶ ಈ ಬಾರಿ 23 ಅಡಿ ಎತ್ತರವಿದ್ದು, 3.10 ಲ.ರೂ. ನೀಡಿ ಖರೀದಿಸಲಾಗಿದೆ. ಕಳೆದ ವಾರ ಹೈದರಾಬಾದ್‌ನಿಂದ ನಗರ ಪ್ರವೇಶಿಸಿದ ಗಣೇಶ ಮೂರ್ತಿಗೆ ಬೂವನಹಳ್ಳಿ ಕ್ರಾಸ್‌ನಿಂದಲೇ ಅದ್ದೂರಿ ಮೆರವಣಿಗೆ ಮಾಡಲಾಯಿತು. ಸಾರ್ವಜನಿಕ ಗಣೇಶ ಪ್ರತಿಷ್ಠಾಪನೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ.

ಗಣೇಶನಿಗೆ ಸಾಮ್ರಾಟ್ ಗಣೇಶ, ಹೇಮಾವತಿ ನಗರದ ಗಣೇಶ, ಹಾಸನ ಮಹಾರಾಜ, ವಿದ್ಯಾನಗರ ಗಣೇಶ, ಮಹಾಗಣಪತಿ ಹೀಗೆ ಆಕರ್ಷಕ ಹೆಸರು ಇಟ್ಟು ಅದ್ದೂರಿಯಾಗಿ ಗಣೇಶನನ್ನು ಪ್ರತಿಷ್ಠಾಪಿಸಲಾಗುತ್ತಿದೆ. ಕಾರ್ಯಕ್ರಮ ಆಯೋಜನೆ, ಪ್ರಸಾದ ವಿನಿಯೋಗ, ಅನ್ನದಾಸೋಹ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ



ಖರ್ಚು ಮಾಡಲಾಗುತ್ತಿದೆ.

### ರಾಜಕೀಯ ಲೆಕ್ಕಾಚಾರ

ನಗರ ಮತ್ತು ಗ್ರಾಮೀಣ ಭಾಗದಲ್ಲಿ ಬೃಹದಾಕಾರದ ಗಣೇಶ ಮೂರ್ತಿಗಳು ಪ್ರತಿಷ್ಠಾಪನೆ ಆಗುತ್ತಿವೆ ಎಂದರೆ ಅದಕ್ಕೆ ಜನಪ್ರತಿನಿಧಿಗಳ ಸಂಪೂರ್ಣ ಬೆಂಬಲ ಇದ್ದೇ ಇದೆ. 2028ರ ವಿಧಾನಸಭೆ ಚುನಾವಣೆಗೆ ಇನ್ನೇನು ಒಂದೂವರೆ ವರ್ಷ ಬಾಕಿ ಇದೆ. ಅದರ ನಡುವೆ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಯುವ ಸಾಧ್ಯತೆಯೂ ಇದೆ. ಇದೆಲ್ಲದರ ಲೆಕ್ಕಾಚಾರದಲ್ಲೇ ಈ ಬಾರಿ ಸಾರ್ವಜನಿಕ ಗೌರಿ-ಗಣೇಶದ ಲೆಕ್ಕಾಚಾರವೂ ಜೋರಾಗಿಯೇ ಇದೆ.

ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ಟಿಕೆಟ್ ಆಕಾಂಕ್ಷಿಗಳು, ಜನಪ್ರತಿನಿಧಿಗಳು ಗಣೇಶನಿಗೆ ಬಂಡವಾಳ ಹೂಡಿ ಮತದಾರರನ್ನು, ಯುವಕರನ್ನು ಆಕರ್ಷಿಸಲು ಮುಂದಾಗಿರುವುದು ಗುಟ್ಟಾಗಿ ಉಳಿದಿಲ್ಲ. ವರ್ಷದಿಂದ ವರ್ಷಕ್ಕೆ ಸಾರ್ವಜನಿಕ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಹೆಚ್ಚುವ ಜೊತೆಗೆ ಅದ್ದೂರಿತನವೂ ಹೆಚ್ಚುತ್ತಿದೆ.

### ಶಾಂತಿ ಕದಡದಿರಲಿ ಸಂಭ್ರಮ

ಇತ್ತೀಚೆಗೆ ಗಣೇಶೋತ್ಸವವು ಭಕ್ತಿ ಭಾವದ ಪ್ರತೀಕವಾಗದೆ ಧರ್ಮ, ರಾಜಕೀಯ ದಾಳವಾಗಿ ಬದಲಾಗುತ್ತಿದೆ. ಸ್ವಾತಂತ್ರ್ಯ ಸಂಗ್ರಾಮ ಸಂದರ್ಭದಲ್ಲಿ ದೇಶಪ್ರೇಮಿಗಳನ್ನು ಒಗ್ಗೂಡಿಸುವ ಉದ್ದೇಶದಿಂದ ಹೋರಾಟಗಾರ ಬಾಲ ಗಂಗಾಧರ ತಿಲಕ್ ಅವರು ಗಣೇಶೋತ್ಸವವನ್ನು ವೇದಿಕೆಯಾಗಿ ಬಳಸಿದರು. ಆದರೆ ಈಗ ಉತ್ಸವದ ಹೆಸರಿನಲ್ಲಿ ಸಂಭ್ರಮದಿಂದ ಇರುವ ಬದಲು ಶಾಂತಿ ಕದಡುವ ವೇದಿಕೆಯಾಗಿ ಮಾರ್ಪಾಡಾಗಿದೆ. ಕಳೆದ ವರ್ಷ ಗಣೇಶ ವಿಸರ್ಜನೆ ವೇಳೆ ಮೆರವಣಿಗೆಗೆ ಅವಕಾಶ ನೀಡಲಿಲ್ಲ, ಹೆಚ್ಚುವರಿ ಸಮಯ ನೀಡುತ್ತಿಲ್ಲ ಎಂದು ಯುವಕರು ಪೊಲೀಸರೊಂದಿಗೆ ವಾಗ್ವಾದಕ್ಕಿಳಿದರು. ಇನ್ನು ಯುವಕರು ಇಲ್ಲಿ ಭಕ್ತಿಗಿಂತ ವೈಯಕ್ತಿಕ ಪ್ರತಿಷ್ಠೆಯನ್ನು ಪ್ರದರ್ಶನಕ್ಕಿಡುತ್ತಾರೆ. ಇಂತಹ ಅಶಾಂತಿಗೆ ಗಣೇಶನ ಹೆಸರು ಬಳಕೆಯಾಗಬಾರದು ಎಂಬುದು ಪ್ರಜ್ಞಾವಂತ ನಾಗರಿಕರ ಸಲಹೆಯಾಗಿದೆ.

### ಪರಿಸರ ಕಾಳಜಿಯೂ ಮುಖ್ಯ

ಪರಿಸರ ಸ್ನೇಹಿಯಾಗಿ ಗೌರಿ-ಗಣೇಶ ಹಬ್ಬ ಆಚರಿಸುವ ಉದ್ದೇಶದಿಂದ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಹಾಗೂ ರಾಸಾಯನಿಕ ವಸ್ತುಗಳಿಂದ ಗಣೇಶ ಮೂರ್ತಿಗಳ ತಯಾರಿಕೆ, ಸಂಗ್ರಹಣೆ, ಮಾರಾಟ, ವಿಸರ್ಜನೆಗೆ ಜಿಲ್ಲಾಡಳಿತ ಸೂಚನೆ ನೀಡಿದೆಯಾದರೂ ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗುತ್ತಿಲ್ಲ.

ನಿಷೇಧಿತ ಗಣೇಶ ಮೂರ್ತಿಗಳ ತಯಾರಿಕೆ ಅಥವಾ ಮಾರಾಟ ಕಂಡುಬಂದಲ್ಲಿ ಕಾನೂನು ಕ್ರಮದ ಎಚ್ಚರಿಕೆಯನ್ನು ಈಗಾಗಲೇ ನೀಡಲಾಗಿದೆ. ಆದರೆ ಜಿಲ್ಲಾದ್ಯಂತ ಪಿಒಪಿ ಗಣೇಶ ಮೂರ್ತಿಗಳ ಅಬ್ಬರ ಜೋರಾಗಿಯೇ ಇದೆ. ಇದಕ್ಕೆ ಸಂಪೂರ್ಣ ಕಡಿವಾಣ ಅಸಾಧ್ಯ ಎಂಬಂತಾಗಿದೆ.

# ಶಿಕ್ಷಕರ ದಿನಾಚರಣೆ: ನಿವೃತ್ತ ಮುಖ್ಯ ಶಿಕ್ಷಕರಿಗೆ ಗೌರವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜ್ಞಾನಧಾರೆ ಪ್ರಥಮ ದರ್ಜೆ ಕಾಲೇಜು ಹಾಗೂ ಪದವಿ ಪೂರ್ವ ಕಾಲೇಜಿನ ವತಿಯಿಂದ ಶಿಕ್ಷಕರ ದಿನಾಚರಣೆಯನ್ನು ಗೌರವಪೂರ್ವಕವಾಗಿ ಆಚರಿಸಲಾಯಿತು.

ಪಾಳ್ಯದ ಎಸ್‌ಎನ್‌ಆರ್‌ಎಂ ಪ್ರೌಢಶಾಲೆಯ ಹಿರಿಯ ನಿವೃತ್ತ ಮುಖ್ಯ ಶಿಕ್ಷಕರನ್ನು ಸನ್ಮಾನಿಸಿ ಗೌರವ ಸಲ್ಲಿಸಲಾಯಿತು. ಶಿಕ್ಷಕರಾಗಿ ಅವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಶಿಕ್ಷಣ ಕ್ಷೇತ್ರಕ್ಕೆ ಅವರ ಕೊಡುಗೆಯನ್ನು ಗೌರವಿಸಲಾಯಿತು.

ಅಧ್ಯಕ್ಷತೆಯನ್ನು ಜ್ಞಾನಧಾರೆ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎಂ.ಎನ್.ಕಾಂತರಾಜ್ ವಹಿಸಿದ್ದರು. ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಹೇಮಂತ್ ಕುಮಾರ್, ಉಪನ್ಯಾಸಕರಾದ ಕೃಷ್ಣರಾಜು, ಕಾಲೇಜಿನ ಬೋಧಕ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಶಿಕ್ಷಕರ ದಿನಾಚರಣೆಯ ಅಂಗವಾಗಿ ಶಿಕ್ಷಕರ ಮಹತ್ವ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಅವರ ಪಾತ್ರ, ಹಾಗೂ ಶಿಕ್ಷಕರು ಸಲ್ಲಿಸುತ್ತಿರುವ ಸೇವೆಯ ಕುರಿತು ಮೆಚ್ಚುಗೆ ವ್ಯಕ್ತವಾಯಿತು.

# ಸೋಲು-ಗೆಲುವು ಸಮಾನವಾಗಿ ಸ್ವೀಕರಿಸಿ: ಶಂಭುನಾಥ ಶ್ರೀ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಕ್ರೀಡೆಯಲ್ಲಿ ಸೋಲು-ಗೆಲುವು ಸಹಜ. ಗೆಲುವು ಬಂದಾಗ ಅಹಂಕಾರ ಪಡದೆ, ಸೋತಾಗ ಕುಗ್ಗದೆ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕೆಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಬಿಜಿಎಸ್ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ 2026-27ನೇ ಸಾಲಿನ ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಆಶೀರ್ವಚನ ನೀಡಿದರು.

ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಸ್ಥಿರತೆಗೂ ಕ್ರೀಡೆ ಅವಶ್ಯಕ. ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡು ಶ್ರಮಪಟ್ಟು ಸಾಧನೆ ಮಾಡಬೇಕು. ತಾಲ್ಲೂಕು ಮಟ್ಟದಿಂದ ಜಿಲ್ಲೆ, ರಾಜ್ಯ ಹಾಗು ರಾಷ್ಟ್ರ ಮಟ್ಟದವರೆಗೆ ಆಯ್ಕೆಯಾಗುವ ಗುರಿ ಹೊಂದಬೇಕು. ಕ್ರೀಡಾ ಕ್ಷೇತ್ರದಲ್ಲಿರುವ ಅವಕಾಶ ಸದುಪಯೋಗಪಡಿಸಿಕೊಂಡು ತಂದೆ-ತಾಯಿ, ಶಿಕ್ಷಣ ಸಂಸ್ಥೆ ಹಾಗೂ ತಾಲ್ಲೂಕಿಗೆ ಕೀರ್ತಿ ತರಬೇಕೆಂದು ಕರೆ ನೀಡಿದರು.

ಗೆಲುವನ್ನು ತಲೆಗೆ ಏರಿಸಿಕೊಳ್ಳಬಾರದು, ಸೋಲನ್ನು ಹೃದಯಕ್ಕೆ ಇಳಿಸಿಕೊಳ್ಳಬಾರದು ಎಂಬ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಸಂದೇಶವನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು. ಗೆದ್ದವರು ಸೋತವರನ್ನು ಪ್ರೋತ್ಸಾಹಿಸಿ ಪರಸ್ಪರ ಗೌರವದಿಂದ ನಡೆಸಿಕೊಳ್ಳಬೇಕೆಂದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಹೆಚ್.ಕೆ.ಸುರೇಶ್ ಮಾತನಾಡಿ, ಕ್ರೀಡೆ ವಿದ್ಯಾರ್ಥಿಗಳ ದೈಹಿಕ ಹಾಗು ಮಾನಸಿಕ ಬೆಳವಣಿಗೆಗೆ ಪೂರಕ ಕ್ಷೇತ್ರ. ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಪ್ರತಿಯೊಬ್ಬ ಕ್ರೀಡಾಪಟುವೂ ಗೆಲುವಿನ ಗುರಿಯೊಂದಿಗೆ ಶ್ರಮಿಸಬೇಕು. ಸೋಲು ಎದುರಾದರೂ ಧೈರ್ಯ ಕಳೆದುಕೊಳ್ಳದೆ ಮುಂದಿನ ಅವಕಾಶಕ್ಕಾಗಿ ಮತ್ತಷ್ಟು ಪರಿಶ್ರಮಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ತಾಲ್ಲೂಕು ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿ ಜಿಲ್ಲಾ ಹಾಗು ರಾಜ್ಯಮಟ್ಟಕ್ಕೆ ಆಯ್ಕೆಯಾಗಬೇಕು. ಕ್ರೀಡೆಯಲ್ಲಿ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯವಿದೆ. ಆದ್ದರಿಂದ ಪೋಷಕರು ಹಾಗೂ ಶಿಕ್ಷಕರು ಮಕ್ಕಳ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕೆಂದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಮಾತನಾಡಿ, ಸೋಲನ್ನು ಸಾಧನೆಯ ಮೆಟ್ಟಿಲಾಗಿಸಿಕೊಳ್ಳಿ ಎಂದು ಕರೆ ನೀಡಿದರು.

# ಮನೆ ಹಸ್ತಾಂತರ ವಿಚಾರದಲ್ಲಿ ಅನ್ಯಾಯ: ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿರುವ ಮನೆಗಳ ವಿತರಣೆಯಲ್ಲಿ ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಅರ್ಹ ಫಲಾನುಭವಿಗಳಿಗೆ ವಂಚಿಸಿ ಅನ್ಯಾಯ ಮಾಡಲಾಗುತ್ತಿದೆ ಎಂದು ನಗರಸಭೆ ಮಾಜಿ ಅಧ್ಯಕ್ಷ ಗಿರೀಶ್ ಮತ್ತು ಮಾಜಿ ಸದಸ್ಯ ಹರ್ಷವರ್ಧನ್ ಆರೋಪಿಸಿದರು.

ಹೌಸಿಂಗ್ ಫಾರ್ ಆಲ್ ಯೋಜನೆ ಅಡಿ ನಗರದ ಕಂತೇನಹಳ್ಳಿ ಬಡಾವಣೆಯ ವಾಸಿ ಶ್ವೇತಾ ಮಧು ಎಂಬ ದಲಿತ ಸಮುದಾಯಕ್ಕೆ ಸೇರಿದ ಕುಟುಂಬ ಸರ್ಕಾರದ ನಿಯಮದಂತೆ ಅರ್ಜಿ ಸಲ್ಲಿಸಿದ್ದು ಆ ಅರ್ಜಿ ಕೂಡ ಆಯ್ಕೆಯಾಗಿದೆ. ಅಲ್ಲದೆ ತಾವು ಬಂದು ಹಕ್ಕು ಪತ್ರ ಪಡೆಯುವಂತೆ ನಗರಸಭೆ ವತಿಯಿಂದ ಶ್ವೇತಾ ಮಧು ಎಂಬ ಫಲಾನುಭವಿಗೆ ಸೂಚನೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಕಳೆದ ಭಾನುವಾರ ಕ್ಷೇತ್ರದ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡರ ಸಮ್ಮುಖದಲ್ಲಿ ಲಾಟರಿ ಮೂಲಕ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸುವ ಕಾರ್ಯಕ್ರಮದಲ್ಲಿ ಉದ್ದೇಶ ಪೂರ್ವಕವಾಗಿಯೇ ಸಚಿವರು ಹಾಗೂ ನಗರಸಭೆ ಮಾಜಿ ಅಧ್ಯಕ್ಷ ಸಮೀವುಲ್ಲಾ ದಲಿತ ಸಮುದಾಯಕ್ಕೆ ಸೇರಿದ ಅರ್ಹ ಫಲಾನುಭವಿ ಹೆಣ್ಣು ಮಗಳಿಗೆ ಸಾರ್ವಜನಿಕವಾಗಿ ನಿಂದಿಸಿ ಹಕ್ಕುಪತ್ರ ನೀಡದೆ ಅವಮಾನಿಸಿ ಕಳಿಸಿರುವುದು ದಲಿತ ಸಮುದಾಯಕ್ಕೆ ಸೇರಿದ ಹೆಣ್ಣು ಮಗಳಿಗೆ ಮಾಡಿದ




ಅಪಮಾನವಲ್ಲವೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಗರಸಭೆಯ ಪೌರಾಯುಕ್ತರು ತಾವು ಸರ್ಕಾರದ ಅಧಿಕಾರಿಯೆಂಬುದನ್ನ ಮರೆತು ಸಮಿವುಲ್ಲಾ ಅವರ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಸರ್ಕಾರಿ ನಿಯಮವನ್ನು ಮೀರಿ ನಗರಸಭೆಯ ಮಾಜಿ ಅಧ್ಯಕ್ಷ ಹಾಗೂ ಸದಸ್ಯರನ್ನು ವೇದಿಕೆ ಮೇಲೆ ಕೂರಿಸುವ ಮೂಲಕ ಶಿಷ್ಟಾಚಾರವನ್ನು ಉಲ್ಲಂಘಿಸಿದ್ದು ಇವರ ವಿರುದ್ಧವೂ ಸಹ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಹರ್ಷವರ್ಧನ್ ಮಾತನಾಡಿ, ನನ್ನ ಮೇಲಿನ ವೈಯಕ್ತಿಕ ದ್ವೇಷಕ್ಕೆ ದಲಿತ ಸಮುದಾಯಕ್ಕೆ ಸೇರಿದ ಬಡ ಕುಟುಂಬಕ್ಕೆ ಅನ್ಯಾಯ ಮಾಡುತ್ತಿರುವುದು ಸರಿಯಲ್ಲ ಅರ್ಹ ಫಲಾನುಭವಿಯಾಗಿರುವ ಶ್ವೇತಾ ಮಧು ಕುಟುಂಬಕ್ಕೆ ವಸತಿ ಮನೆ ನೀಡದೆ ತಡೆಹಿಡಿದು ನೋಡಿ ಎಂದು ಸವಾಲು ಹಾಕಿದರು.

ಸಾರ್ವಜನಿಕವಾಗಿ ದಲಿತ ಸಮಾಜದ ಹೆಣ್ಣು ಮಗಳಿಗೆ ಅವಮಾನವಾಗಿರುವುದನ್ನು ಪೊಲೀಸ್ ಇಲಾಖೆಯ ಗಮನಕ್ಕೆ ತಂದಿದ್ದು ಪ್ರಕರಣ ಕೂಡ ದಾಖಲಿಸಿಬಹುದಾಗಿ ಹೇಳಿದವರು ಪೊಲೀಸರು ಕ್ರಮ ಕೈಗೊಳ್ಳದೆ ಹೋದರೆ ಪೊಲೀಸ್ ಠಾಣೆ ಆವರಣದಲ್ಲಿ ಪ್ರತಿಭಟನೆ ನಡೆಸುವುದಾಗಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಧು, ಶ್ವೇತಾ, ಕರಿಯಮ್ಮ ಇತರರು ಉಪಸ್ಥಿತರಿದ್ದರು.

### ಪಾರದರ್ಶಕತೆ ಕಾಪಾಡಲಾಗಿದೆ

ಸರ್ಕಾರದ ಯೋಜನೆ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಸಲುವಾಗಿಯೇ ಸಾರ್ವಜನಿಕರ ಸಮ್ಮುಖದಲ್ಲಿ ವಾರ್ಡ್ ವಾರು ಭೇಟಿ ಮಾಡಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಆ ಮಾನದಂಡದಲ್ಲಿಯೇ ಸ್ವತ: ಫಲಾನುಭವಿಗಳೆ ಲಕ್ಕಿ ಡಿಪ್ ಮೂಲಕ ತಮ್ಮ ಮನೆಗಳನ್ನು ತಾವೇ ಆಯ್ಕೆ ಮಾಡಿಕೊಳ್ಳುವಂತಿದ್ದಾರೆ. ಇಷ್ಟು ಪಾರದರ್ಶಕವಾಗಿ ವಿತರಣೆ ಮಾಡುತ್ತಿದ್ದರೂ ದ್ವೇಷ ರಾಜಕಾರಣದಿಂದ ಈ ರೀತಿ ಹೇಳಿಕೆ ನೀಡಲಾಗುತ್ತಿದೆ. ನಾನಾಗಲಿ, ಸಚಿವರಾಗಲಿ ಅಥವಾ ನಗರಸಭೆ ಅಧಿಕಾರಿಗಳಾಗಲಿ ಯಾರಿಗೂ ಅವಮಾನ ಮಾಡುವಂತಹ ಸನ್ನಿವೇಶ ಅಲ್ಲಿ ನಿರ್ಮಾಣವಾಗಿಲ್ಲ0 ಎಂದು ನಗರಸಭೆ ಮಾಜಿ ಅಧ್ಯಕ್ಷ ಎಂ. ಸಮೀವುಲ್ಲಾ ಸ್ಪಷ್ಟನೆ ನೀಡಿದರು.

## ಇತಿಹಾಸದಲ್ಲಿ ಈ ದಿನ

### ಸೆಪ್ಟೆಂಬರ್-09

1791: ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿ.ಸಿ.ಗೆ ಜಾರ್ಜ್ ವಾಷಿಂಗ್ಟನ್ ಅವರ ಗೌರವಾರ್ಥವಾಗಿ ಹೆಸರು ಇಡಲಾಯಿತು.

1850: ಕ್ಯಾಲಿಫೋರ್ನಿಯಾ ಅಮೆರಿಕದ 31ನೇ ರಾಜ್ಯವಾಗಿ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

1948: ಉತ್ತರ ಕೊರಿಯಾದಲ್ಲಿ ಕೊರಿಯನ್ ಡೆಮಾಕ್ರಟಿಕ್ ಪೀಪಲ್ಸ್ ರಿಪಬ್ಲಿಕ್ ಸ್ಥಾಪನೆಯಾಯಿತು.

1965: ಭಾರತದ ವಿರುದ್ಧದ 1965ರ ಯುದ್ಧದ ಸಂದರ್ಭದಲ್ಲಿ ಭಾರತೀಯ ಸೇನೆ ಲಾಹೋರ್ ಸಮೀಪದ ಬುರಕಿ ಪ್ರದೇಶವನ್ನು ವಶಪಡಿಸಿಕೊಂಡಿತು.

1991: ತಜಿಕಿಸ್ತಾನ ಸೋವಿಯತ್ ಒಕ್ಕೂಟದಿಂದ ಸ್ವಾತಂತ್ರ್ಯ ಘೋಷಿಸಿತು.

**ಜನನ**

1828: ರಷ್ಯಾದ ಪ್ರಸಿದ್ಧ ಸಾಹಿತಿ ಲಿಯೋ ಟಾಲ್‌ಸ್ಟಾಯ್

1905: ಭಾರತದ ಪ್ರಸಿದ್ಧ ಸಮಾಜ ಸುಧಾರಕ ಹಾಗೂ ರಾಜಕಾರಣಿ ಗೋವಿಂದ ವಲ್ಲಭ ಪಂತ್

1920: ಭಾರತೀಯ ವಿಜ್ಞಾನಿ ಹಾಗೂ ಶಿಕ್ಷಣ ತಜ್ಞ ಡಾ. ಹೋಮಿ ಸೆಥ್ನಾ

**ನಿಧನ**

1976: ಚೀನಾದ ಕ್ರಾಂತಿಕಾರಿ ನಾಯಕ ಮಾವೋ ಝೆಡಾಂಗ್

# ಬೇಳೇಸಾರೆಂತಕೆ,......ತೊಳಿಯಕ್ಕಾ?

**ಧನಂಜಯ ಜೀವಾಳ ಬಿ.ಕೆ.**

ಗ್ರಾಮಾಯಣ-2

ಶಾಂತಿಯನ್ನು ಅಪೇಕ್ಷಿಸುವವರು ಯುದ್ಧಕ್ಕೆ ಸದಾ ಸಿದ್ಧನಿರಬೇಕು ಎಂಬುದನ್ನು ಮನದಟ್ಟು ಮಾಡಿಕೊಂಡ ಬೋಬಯ್ಯ ಇದು ನನ್ನ ಬದುಕಿನ ಅಳಿವು-ಉಳಿವಿನ ಪ್ರಶ್ನೆ. ಈ ರೀತಿಯ ದಬಾವಣೆಗಳನ್ನು ಎಂದಿನಿಂದಲ್ಲಾ ಸಹಿಸಿಕೊಂಡು ಬಂದಿಲ್ಲ? ಈ ಉಳ್ಳವರ ಆಟಾಟೋಪ ಜಾಸ್ತಿಯಾಯ್ತು. ತಮ್ಮ ಅಣತಿಯಲ್ಲೇ ಇತರೆಲ್ಲರು ಬದುಕಬೇಕೆಂಬ ದುರುಳತನಕ್ಕೆ ಹೇಗಾದರೂ ಕೊನೆಹಾಡಬೇಕೆಂದು ನಿರ್ಧರಿಸಿದ. ದಿನವೂ ಊಟಕ್ಕೆ ಅನ್ನದ ಜೊತೆಗೆ ಕ್ರಿಮಿನಲ್ಲಾಗಿರೋದೇನಾದ್ರೂ ಇದ್ರೆ ಮಾತ್ರ ಇಷ್ಟಪಟ್ಟು ತಿಂತಿದ್ದ ಬೋಬಯ್ಯನಿಗೆ ಏನಿಲ್ಲವೆಂದರೂ ಮನೆಯಲ್ಲಿ ಸಾಕಿದ್ದ ನಾಟಿಕೋಳಿಯ ಮೊಟ್ಟೆ ಇಲ್ಲವೇ ಸುಟ್ಟ ಮೀನಿನ ತುಂಡಾದರೂ ಬೇಕಿತ್ತು. ಕೆಸೊಳ್ಳಿನ ಬೋಬಯ್ಯ ದೇವಕಿಯನ್ನು ಮದುವೆಯಾಗಿ ಮನೆಯಾಳ್ತನಕ್ಕೆ ದೆಬ್ರಳ್ಳಿಗೆ ಬಂದವನು; ಅತ್ತೆ, ಮಾವ ಇಬ್ಬರೂ ಕಾಲವಾದ ನಂತರ ನೀರ್‌ಕಾಸ್ ಕೊಳದ ಕಾಡಂಚಿನಲ್ಲಿ ಈಗಾಗಲೇ ಇದ್ದ ಎರಡೆಕರೆ ಹಿಡುವಳಿ ಜಮೀನನ್ನು ನಿಷ್ಠೆಯಿಂದ ಸಾಗುವಳಿ ಮಾಡಿಕೊಂಡು, ಕಾಫಿ, ಮೆಣಸು, ಅಡಿಕೆ ಬೆಳೆದಿದ್ದ. ಸುತ್ತಮುತ್ತಲಿನ ದೊಡ್ಡ ಜಮೀನುದಾರರು ತಮ್ಮ ಹಿಡುವಳಿಗಳ ನಡುವೆ ತಮ್ಮವನಲ್ಲದವನೊಬ್ಬ ಇರುವುದನ್ನು ಸಹಿಸದೇ ಆಗಾಗ ದನ ನುಗ್ಗಿಸುವುದು, ಮಳೆಗಾಲದ ಅಗಾಧ ಪ್ರಮಾಣದ ನೀರನ್ನು ಬೋಬಯ್ಯನ ಜಮೀನಿನೆಡೆಗೆ ತಿರುಗಿಸುವುದೋ, ಬೇಸಿಗೆಯಲ್ಲಿ ಬೆಂಕಿರೋಟು ಮಾಡುವ ನೆಪದಲ್ಲಿ ಅಗ್ನಿಪರೀಕ್ಷೆಗೀಡು ಮಾಡುವುದೋ ನಡೆಯುತ್ತಿತ್ತು. ಮೂವತ್ತು ನಲವತ್ತೆಕರೆ ಕಾಫಿ ತೋಟ ಹೊಂದಿದ್ದ ಷಣ್ಮುಖನ ಜಮೀನಿಗೆ ಗೊಬ್ಬರದ ಲೋಡು ಕೊಂಡೊಯ್ಯಲು ರಸ್ತೆಯೊಂದನ್ನು ನಿರ್ಮಿಸುವ ಅಗತ್ಯಕ್ಕಾಗಿಸರ್ವೆ ಮಾಡಲೆಂದು ಒಂದಿನ ನಾಲ್ಕಾರು ಮಂದಿ ಸರ್ಕಾರಿ ನೌಕರರು ಬೋಬಯ್ಯನ ಮನೆ ಮುಂದಿನ ಕಾಲ್ದಾರಿಯಲ್ಲಿ ಸರ್ವೆ ಭವಂತು ಸುಖಿನಹ ಎನ್ನುವಂತೆ ನಡೆದುಕೊಂಡು ಬಂದರು. ಷಣ್ಮುಖ ಆಡಳಿತ ಪಕ್ಷದ ತಾಲ್ಲೂಕು ಮಟ್ಟದ ಪದಾಧಿಕಾರಿಯಾಗಿದ್ದರಿಂದ ಯಾವುದೋ ಯೋಜನೆಯಡಿ ರಸ್ತೆ ನಿರ್ಮಾಣಕ್ಕೆ



ಅಲಾಟ್‌ಮೆಂಟೊಂದನ್ನು ಮಾಡಿಸಿಕೊಂಡು, ಆ ರಸ್ತೆಯು ಬೋಬಯ್ಯನ ಎರಡೆಕರೆಯ ತುಂಡು ಜಮೀನಿನ ಮೂಲಕವೇ ಹಾದು ಹೋಗುವಂತೆ ನಕಾಶೆಯಲ್ಲಿ ಗುರುತನ್ನು ಮಾಡಿಸಿ ತಂದಿದ್ದ. ಅಧಿಕಾರಸ್ತರು ಸಾಮಾನ್ಯರಿಗೆ ಭಯವನ್ನು, ಅಭದ್ರತೆಯನ್ನು ಒಡ್ಡುತ್ತಾರೆ ಎಂಬುದಕ್ಕೆ ಇದೊಂದು ಉದಾಹರಣೆ. ಸದಾ ತಮ್ಮ ಆಶ್ರಯಕ್ಕೆ ಹಾತೊರೆಯಲೆಂದು ಹಾಗೂ ತಮಗೆ ಎದುರಾಗಿ ದನಿಯೆತ್ತದಿರಲೆಂದು ಆಮಿಷವನ್ನು ಒಡ್ಡುತ್ತಾರೆ. ತನ್ನವರು ಎನ್ನುವ ಕೂಡು-ಕುಟುಂಬವನ್ನು ಹತ್ತಿರದಲ್ಲೆಲ್ಲೂ ಹೊಂದಿರದಿದ್ದ ಬೋಬಯ್ಯ, ಷಣ್ಮುಖನಂಥಾ ದೊಡ್ಡ ರೈತನನ್ನು ಅದರಲ್ಲೂ ರಾಜಕೀಯದ ಸಂಪರ್ಕವಿರುವವನನ್ನು ಎದುರಿಸುವುದು ಹೇಗೆಂದು ತಿಳಿಯದೇ ಕಂಗಾಲಾಗಿ ಕುಳಿತಿದ್ದ. ಹೊಟ್ಟೆ ಚುರುಗುಟ್ಟುತ್ತಿದ್ದ ಬೋಬಯ್ಯ ಹೆಂಡತಿಯನ್ನುದ್ದೇಶಿಸಿ ಸಾರೆಂತ ಮಾಡಿದ್ದೀಯ? ಎಂದ. ಯಾವುದೋ ಯೋಚನೆಯಲ್ಲಿ ಮುಳುಗಿದ್ದ ದೇವಕಿ ಬೇಳೆ ತಿಳಿಸಾರು ಎಂದಳು. ರಸ್ತೆ ಕಿರಿಕಿರಿಯಿಂದ ಗೊಂದಲದ ಗೂಡಾಗಿದ್ದ ಬೋಬಯ್ಯ ಬೇಳೇಸಾರೆಂತಕೆ, ಪುಕ್ಕಿ ತೊಳಿಯಕ್ಕಾ? ಎಂದವನೇ ಉಣ್ಣಲೆಂದು ಕೈ ತೊಳೀತಿದ್ದವನು ಅದೇ ಚೊಂಬನ್ನು ನಡುಮನೆಯೆಲ್ಲ ನೀರಾಗುವಂತೆ ಎತ್ತಿ ಎಸೆದವನೇ ಚಪ್ಪಲಿ ಮೆಟ್ಟಿಕೊಂಡು ದುಸದುಸನೇ ಅಂಗಳ ದಾಟಿ ತನ್ನ ಜಮೀನಿನ ಮೂಲಕ ರಸ್ತೆ ಮಾಡಲು ಗೂಟ ನೆಟ್ಟು ಅಳತೆ ಮಾಡುತಿದ್ದ ಮೇಸ್ತ್ರಿಯನ್ನು ಹಿಂಭಾಗದಿಂದ ಸಮೀಪಿಸಿದವನೇ ಅವನ ಅಂಡು ಬಗಾಲಾಗುವಂತೆ ಒದ್ದೇಬಿಟ್ಟ. ಷಣ್ಮುಖನಾದಿಯಾಗಿ ರಸ್ತೆ ಗುರುತಿಸಲು ಬಂದಿದ್ದ ಗ್ರಾಮ ಲೆಕ್ಕಿಗ, ಸರ್ವೆಯರ್, ರಸ್ತೆ ಕಂತ್ರಾಕ್ಟರ್ ಎಲ್ಲರೂ ಸ್ಥಂಭೀಭೂತರಾದರು. ಯಾರಿಗೂ ಯಾವತ್ತೂ ತಿರುಗಿ ಮಾತನಾಡದಿದ್ದ ಬೋಬಯ್ಯ ಇವತ್ತು ಒಬ್ಬನ ಮೇಲೆ ಕೈಮಾಡುವಷ್ಟು ವ್ಯಗ್ರನಾಗಿದ್ದಾನೆಂದರೆ, ಏನೋ ಆಗಬಾರದ್ದೇ ಆಗಿರಬೇಕೆಂದುಕೊಂಡರು. ಬೋಬಯ್ಯ ಯಾವುದೋ ಕ್ಷುದ್ರ ದೇವತೆ ಮೈಮೇಲೆ ಆವಾಹನೆಯಾದಂತೆ ಥರಥರಿಸುತಿದ್ದ.

ಕಾರಣವೇನಿಲ್ಲ, ಹತ್ತಾರು ವರ್ಷಗಳಿಂದ ಹೆಂಡತಿ ಮಕ್ಕಳೊಂದಿಗೆ ಗೇಯ್ದು ಜೀವನಕ್ಕೆಂದು ಮಾಡಿಕೊಂಡಿದ್ದ ಎರಡೆಕರೆ ತೋಟದೊಳಗೇ ಈ ಗ್ರಾಮಾಯಣ - 2 /2 ಷಣ್ಮುಖ ತನ್ನ ಜಮೀನಿಗೆ ಹೋಗಲು ರಸ್ತೆ ಮಾಡಿಸುತಿದ್ದುದು, ಅದಕ್ಕೆ ಸರ್ಕಾರೀ ಯಂತ್ರವೂ ಕೈಜೋಡಿಸಿದ್ದಲ್ಲದೇ ಕಡೆಗೆ ತನ್ನ ಪರ ನಿಂತು ಮಾತನಾಡಿ ನ್ಯಾಯ ಕೊಡಿಸಲು ಯಾರೂ ಇಲ್ಲದ್ದು, ಇದೆಲ್ಲಕ್ಕಿಂತಲೂ ಹೆಚ್ಚಾಗಿ ಮಧ್ಯಾಹ್ನದ ಊಟಕ್ಕೆ ಹೆಂಡತಿ ದೇವಕಿ ಬೇಳೆ ತಿಳಿಸಾರು ಮಾಡಿದ್ದು, ಒಟ್ಟಾರೆ ಬೋಬಯ್ಯ ತನ್ನ ತಲೆಕೂದಲನ್ನು ತಾನೇ ಕಿತ್ತುಕೊಳ್ಳುವಷ್ಟು ತರಕಲಾಂಡಿಯಾಗಿ ಹೋಗಿದ್ದ. ಮುಕುಳಿ ಮೇಲೆ ಬಿದ್ದ ಹೊಡೆತದಿಂದ ಮಕಾಡೆಯಾಗಿ ಉರುಳಿದ ಮೇಸ್ತ್ರಿಯ ನೆರವಿಗೆ ಬಂದ ಕಂತ್ರಾಕ್ಟುದಾರ ಮತ್ತು ಷಣ್ಮುಖ, ಬೋಬಯ್ಯನನ್ನ ದಬಾಯಿಸತೊಡಗಿದರು. ಸರ್ಕಾರಿ ವ್ಯವಸ್ಥೆಯ ಒಳಾಂಗಣವನ್ನು ಅರಿಯದ ಬೋಬಯ್ಯನಿಗೆ ಯಾವ್ಯಾವುದೋ ಕಾಗದ ಪತ್ರಗಳನ್ನು ತೋರಿಸಿ, ಹೆಚ್ಚು ಮಾತನಾಡಿದರೆ ದಾಖಲೆಯೇ ಇಲ್ಲದ ಬೋಬನ ಎರಡೂ ಎಕರೆಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಾಗಿ 'ಮಕಿ ಹಾಕಿದರು. ದೊಣ್ಣೆ ಯಾರ ಕೈಯಲ್ಲಿರುತ್ತೋ ಅವನದೇ ಎಮ್ಮೆಯಾದ್ದರಿಂದ ಈಗಾಗಲೇ ಷಣ್ಮುಖನಿಂದ ನಾನಾರೀತಿಯ ಕಿರುಕುಳ ಅನುಭವಿಸಿದ್ದ ಬೋಬಯ್ಯ ಮರುಮಾತನಾಡದೇ ಸುಮ್ಮನಾದ. ಉಸಿರುದೆಸೆಯಿಲ್ಲದೇ ಮನೆಗೆ ಹೋದ ಬೋಬಯ್ಯ, ಜಗುಲಿಯಿಂದಲೇ ಮನೆಯೊಳಗೆ ಕಣ್ಣುಹಾಯಿಸಿದ. ದೇವಕಿ ನಡುಮನೆಯೆಲ್ಲ ಚೆಲ್ಲಾಡಿಹೋಗಿದ್ದ ನೀರನ್ನು ಬಟ್ಟೆಯಿಂದ ಒರೆಸುತಿದ್ದಳು. ಬೇಳೆ ತಿಳಿಸಾರಿನ ವಿಚಾರವಾಗಿ ಎಗರಾಡಿದಕ್ಕಾಗಿ ನಾಚಿಕೆಯೆನಿಸಿತು. ಕ್ಷಮೆ ಕೇಳಬೇಕೆಂದುಕೊಂಡ, ತನ್ನ ಅವಿವೇಕದ, ಅತಿರೇಕದ ಅಸಡ್ಡೆಯ ಬಾಲಿಶ ನಡೆಯ ಬಗ್ಗೆ ಅಸಹ್ಯವೆನಿಸಿತು. ಧೈರ್ಯ ಎಂದರೆ ಸೀದಾ ಹೊಡೆದಾಟಕ್ಕೆ ತೋಳೇರಿಸಿ ನಿಲ್ಲುವುದಲ್ಲ. ಎಂತಹ ಒತ್ತಡದ, ಪ್ರತಿಕೂಲ, ಸಂದಿಗ್ಧ ಸನ್ನಿವೇಶದಲ್ಲೂ ತನ್ನಾತ್ಮ ಬಲದ ಮೇಲಿನ ಭರವಸೆಯಿಂದ ದೃಢವಾಗಿ ನಿಂತು ಎದುರಿಸುವುದೇ ನಿಮ್ಮಲ್ಲಿ ಇರಬಹುದಾದ ನಿಜವಾದ ಶಕ್ತಿ. ಸೋಲೋದು, ಗೆಲ್ಲೋದು ಬಿಡಿ, ಅದು ಆ ಕ್ಷಣದ ಸತ್ಯ ಅಷ್ಟೇ. ಎದುರಿಸಿ ನಿಲ್ಲುವುದು ಹಾಗೂ ಹಾಗೆ ನಿಂತದ್ದನ್ನು ನೆನಪಿಸಿಕೊಳ್ಳುವುದು, ನಮಗೆ ನೀಡುವ ಆತ್ಮತೃಪ್ತಿಯನ್ನು ಈ ಜಗತ್ತಿನಲ್ಲಿ ಬೇರಾವುದೂ ನೀಡುವುದಿಲ್ಲ. ಅಂತಹ ಆತ್ಮ ತೃಪ್ತಿಯ ಅನುಭೂತಿಯ ಕಲ್ಪನೆಯೇ ಇಲ್ಲದ ನಾವೆಂತಹ ನಿಕೃಷ್ಟ ಬದುಕು ಬದುಕುತಿದ್ದೇವೆ? ನಮ್ಮ ಈ ಬದುಕಿನ ಉದ್ದೇಶವಾದರೂ ಏನು? ಈ ಬದುಕಿಗೊಂದು ಅರ್ಥವಿದೆಯೇ? ಈ ಬದುಕಿನ ಅಂತಿಮ ಉದ್ದೇಶವಾದರೂ ಏನು? ಕ್ಷಣಕ್ಷಣಗಳು ಕಳೆದಂತೆ ಇತಿಹಾಸಕ್ಕೆ ಸೇರುತ್ತಿರುವ ಈ ವರ್ತಮಾನದಲ್ಲಿ ಬೇಳೇಸಾರೆಂತಕೆ, .ತೊಳಿಯಕ್ಕಾ? ನಮ್ಮ ಸ್ಥಾನವಾದರೂ ಏನು? (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248